ಸದ್ಯದಲ್ಲೇ ತನ್ನದೇ ಸಂಸ್ಥೆಯನ್ನು ಹರಿಬಿಡುವುದರಲ್ಲಿದ್ದ. ಅದರದೇ ತಯಾರಿಯ ಉಮೇದಿನ ಮಾತುಗಳನ್ನಾಡುತ್ತಿದ್ದ. ತನ್ನ ಮಾತಿನಿಂದ ತಾನೇ ಉತ್ತೇಜಿತನಾಗಿ ಹುರುಪುಗೊಳ್ಳುತ್ತಿದ್ದ ಅವನ ಮಾತಿನ ಸುರುಳಿಗಳಿಂದ ಬಿಡಿಸಿಕೊಳ್ಳಲು ಅವಳು ಹೆಣಗಬೇಕಾಯಿತು.

ಅವಳು ನಿಜವಾಗಿಯೂ ಮಾತಾಡಬಲ್ಲ ಅಂದರೆ, ಸುಲಭವಾಗಿ, ಯಾವ ಪ್ರಯತ್ನವೂ ಇಲ್ಲದೆ, ಸರಿಯಾದ ಶಬ್ದಗಳಿಗಾಗಿ ಎಂದೂ ತಡಕಾಡದೆ, ಬೇಡದ ಕೃತಕತೆಯ ಅಂತರವಿಲ್ಲದೆ ಮಾತಾಡಬಲ್ಲ ವ್ಯಕ್ತಿಯೆಂದರೆ ಬಹುಶಃ ಸಂದೇಶ ಒಬ್ಬನೇ?... ಅವನ ನೆನಪಿನಿಂದ ಅವಳಿಗೆ ನಗು ಬಂತು. ತಾನಿದ್ದ ಈ ಪರಿಸ್ಥಿತಿಯನ್ನು ಅವನಿಗೆ ಹೇಳಿದರೆ, ಆತ ಅದಕ್ಕೆ ಉಪ್ಪು–ಖಾರ ಹಚ್ಚಿ ಬೆಳೆಸಿ ನಗಿಸಬಹುದಾದ ಸಾಧ್ಯತೆಯನ್ನು ಯೋಚಿಸಿ ನಗು ತಡೆಯಲಾಗಲಿಲ್ಲ. ಹೇಗೋ ಸುಧಾರಿಸಿಕೊಂಡು, ಅಲ್ಲಿ ಆಗಷ್ಟೇ ಆರಂಭವಾಗಿದ್ದ ದಿಢೀರ್ ನೃತ್ಯದಲ್ಲಿ ಭಾಗವಹಿಸುವ ಹೆಳೆ ಮಾಡಿ ದೀಪಕನ ಮಾತಿನ ಬಲೆಯಿಂದ ಹೊರನಡೆದಳು.

ಸಂದೇಶ ಹಿಂದೊಮ್ಮೆ ಶಮಾಳ ಆಫೀಸಿನ ಸಹೋದ್ಯೋಗಿಯಾಗಿದ್ದವನು, ಆಮೇಲಷ್ಟೇ ಕಾಲಾನುಕ್ರಮದಲ್ಲಿ ಪವನಳಿಗೂ ಪರಿಚಿತನಾಗಿದ್ದ. ಶಮಾ ಬೆಂಗಳೂರಿಗೆ ಹೋದ ಮೇಲೂ ಅವನು ಪವನಳ ಸಂಪರ್ಕವನ್ನು ಬಿಟ್ಟಿರಲಿಲ್ಲ. ಎರಡು ಮೂರು ದಿನಗಳಿಗೊಮ್ಮೆಯಾದರೂ ಫೋನು ಮಾಡುತ್ತಿದ್ದ. ಒಳ್ಳೆಯ ನಾಟಕ ಬಂದರೆ ಬುಕ್ ಮಾಡಿ ತಿಳಿಸುತ್ತಿದ್ದ. ಹಾಗೇ ಒಮ್ಮೆ ಮದುವೆಯ ಪ್ರಸ್ತಾಪವನ್ನು ಕೂಡಾ ಪವನಳ ಎದುರಿಗೆ ಇಟ್ಟಿದ್ದ. ಆವತ್ತೂ ಅವಳಿಗೆ ಹೀಗೆ ನಗೆ ಬಂದಿತ್ತು. ಸ್ವಲ್ಪ ಹೆಚ್ಚೇ ಎಂಬಂತೆ ನಕ್ಕು ಮತ್ತೆ ಅವನ ಕ್ಷಮೆ ಯಾಚಿಸಿದ್ದಳು, 'ಏ ಬುರಾ ಮತ್ ಮಾನನಾ,' ಎನ್ನುವಾಗಲೂ ನಗುವನ್ನು ಕಟ್ಟಿಕೊಳ್ಳುವುದು ಅವಳಿಗೆ ಕಷ್ಟವಾಗಿತ್ತು. ಅವಳು ಅವನ ಬಗ್ಗೆ ಆ ದೃಷ್ಟಿಯಲ್ಲಿ ಯೋಚಿಸಿಯೇ ಇರಲಿಲ್ಲ. ಹಾಗಾಗಿ ಅನಿರೀಕ್ಷಿತವಾಗಿ ಬಂದ ಪ್ರಶ್ನೆಗೆ ಅಷ್ಟೊಂದು ನಗೆ ಫಳಕ್ಕನೆ ಒಡೆದು ಬಂದಿತ್ತು. ಅವನಿಗೆ ಹಾಗೆಂದು ಹೇಳಿಯೂ ಹೇಳಿದ್ದಳು.

ಅವನದು ತೀರ ಸರಳ, ಸಾಧಾರಣ ಎನ್ನುವಂತಹ ಮುಖ, ಸಾಮಾನ್ಯ ನಿಲುವು. ಅಷ್ಟೇನೂ ದಪ್ಪಗಿಲ್ಲದ ತೆಳ್ಳನೆಯ ದೇಹ. ದಪ್ಪ ಕೂದಲನ್ನು ತಿದ್ದಿ ತೀಡಿ ಬಾಚಿದ ರೀತಿಗೆ ಅದರ ದಪ್ಪವೆಂಬುದು ಅದೆಲ್ಲಿ ಅಡಗಿತ್ತೋ. ಸದಾ ನಗುತ್ತಿರುವಂತೆ ಭಾಸವಾಗುವ ಬಾಯಿಯ ರಚನೆ, ಅದಕ್ಕೆ ಸರಿಯಾಗಿ ಕಣ್ಣುಗಳಲ್ಲಿನ ಮಿನುಗು. ಅವನಿಗೂ ಮನೆಯಲ್ಲಿ ಮದುವೆಯಾಗಬೇಕೆಂಬ ಒತ್ತಡ ಸುರುವಾಗಿತ್ತಂತೆ. ಯಾವುಯಾವುದೋ ಫೋಟೊ ನೋಡಿಕೊಂಡು, ಯಾರು ಯಾರನ್ನೋ ಮಾತಾಡಿಸಲು ಹೋಗುವುದಕ್ಕಿಂತ ಪರಿಚಯ ಇದ್ದ ಪವನಳನ್ನೇ ಕೇಳುವುದೆಂದು ಯೋಚಿಸಿ ಕೇಳಿದ್ದನಂತೆ, ಅಷ್ಟೆ. ಅವನನ್ನು ಪತಿಯ ಸ್ಥಾನದಲ್ಲಿ ಊಹಿಸುವುದೂ ಅವಳಿಂದ ಸಾಧ್ಯವಾಗಿರಲಿಲ್ಲ. ತನ್ನ ಉತ್ತರದಿಂದ ನಿರಾಶೆ ಆಗಿದ್ದಿದ್ದರೂ, ಅವನು ಅದನ್ನು ತೋರಿಸಿರಲಿಲ್ಲ.

'ಮರೆತು ಬಿಡು ಅದನ್ನು.' ಎಂದಿದ್ದ ತಾನೂ ನಗುತ್ತ. ಅಲ್ಲಿಗೆ ಆ ವಿಷಯ ಮುಗಿದಿತ್ತು. ಅದರಿಂದಾಗಿ ತಮ್ಮ ಗೆಳೆತನ ಹಾಳಾಗುವುದು ಇಬ್ಬರಿಗೂ ಬೇಡವಾಗಿತ್ತು. ಮತ್ತೆಯೂ ಮೊದಲಿನಂತೆ ಅವರು ಒಮ್ಮೊಮ್ಮೆ ಮಧ್ಯಾಹ್ನದ ಊಟದ ಬಿಡುವಿನಲ್ಲಿಯೋ, ಸಂಜೆ ಆಫೀಸು ಮುಗಿದ ಮೇಲೋ ಭೇಟಿಯಾಗುವುದು ಮುಂದುವರಿದಿತ್ತು.

ಮದುವೆಯ ಹಿಂದಿನ ದಿನ ಅವಳ ಅಮ್ಮನೂ – ರಮಕ್ಕನ ಅತ್ತೆಯ ಮಗನನ್ನು ಭೇಟಿಯಾಗುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಳು. ಇದೇನು ಹುಡುಗ ನೋಡುವುದು ಎಂದುಕೊಳ್ಳಬೇಕೆಂದಿಲ್ಲ. ಯಾರನ್ನೋ ಭೇಟಿಯಾಗಲು ಹೋಗುತ್ತಿದ್ದೇವೆ ಎಂದುಕೊ – ಮುಂತಾದ ಎಂದಿನ ಸಂಭಾಷಣೆಯ ಪೀಠಿಕೆ ನಡೆದ ಮೇಲೆ ಅವರು ರಮಕ್ಕನ ಮನೆ ತಲಪುವಾಗ ಮುಸ್ಸಂಜೆಯಾಗಿತ್ತು. ಅಲ್ಲಿ ನೋಡಿದರೆ ಇನ್ನೊಬ್ಬ ದೀಪಕನೇನೋ ಎಂದೆನಿಸಿತು ಪವನಳಿಗೆ. ಅರ್ಧ